ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 6-9
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸಮ ಸಮಾಜದ ನಿರ್ಮಾಣದಲ್ಲಿ ವಿಶ್ವಗುರು ಬಸವಣ್ಣನವರ ಪಾತ್ರ

**ಡಾ. ಸಂಗನಗೌಡ ಶಿವನಗೌಡ**

ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪದವಿ ಮಾಹಾವಿದ್ಯಾಲಯ, ಸಿಂಧನೂರು

***Abstract:***

*12ನೇ ಶತಮಾನದ ಆರಂಭ ಕಾಲದಲ್ಲಿ ಹಿಂದೂ ಧರ್ಮದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮಹತ್ತರ ಕ್ರಾಂತಿಯನ್ನು ಉಂಟುಮಾಡಿದ ಯುಗಪುರುಷ, ವಿಶ್ವಗುರು, ಜಗಜ್ಯೋತಿ, ಭಕ್ತಿ ಭಂಡಾರಿ ಬಸವಣ್ಣನವರು ಭಾರತೀಯ ಸಾಮಾಜಿಕ ಚಿಂತನೆಯಲ್ಲಿ ಮಹತ್ತರ ಸ್ಥಾನ ಪಡೆದಿದ್ದಾರೆ. ಮತೀಯ ಕ್ಷೋಭೆ, ಜಾತಿ ಪದ್ಧತಿ, ವರ್ಗ ವ್ಯವಸ್ಥೆ ಪ್ರಭಾವದಿಂದಾಗಿ ತಾಂಡವವಾಡುತ್ತಿದ್ದ ಆರ್ಯ–ಅನಾರ್ಯ, ಮೇಲು–ಕೀಳು, ಉಚ್ಚ–ನೀಚ, ಸವರ್ಣಿಯ–ಅವರ್ಣಿಯ, ಸ್ಪೃಶ್ಯ–ಅಸ್ಪೃಶ್ಯ ಮುಂತಾದ ಕಂದಚಾರಗಳು ಭಾರತೀಯ ಸಮಾಜದ ಮೇಲೆ ಪರಿಣಾಮ ಬೀರಿದ್ದವು. ಇಂತಹ ವರ್ಗದವರೇ, ಇಂತಹ ವೃತ್ತಿಗಳನ್ನೇ ಅಥವಾ ಈ ಕಸಬುಗಳನ್ನೇ ಅಥವಾ ಕುಲ ಕಸಬುಗಳನ್ನೇ ಅನುಸರಿಸಬೇಕು, ಮಾನವ ನಿರ್ಮಿತ ಕಟ್ಟುಪಾಡುಗಳನ್ನು ದೇವರ ಹೆಸರಿನಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಇಂತಹ ಅಸಮಾನತೆಗಳ ವಿರುದ್ಧ ಬಸವಣ್ಣ ಹೋರಾಡಿದ್ದಾರೆ.*

***Keywords:*** *ವಚನ ಸಾಹಿತ್ಯ, ವಚನ ಚಳವಳಿ, ಬಸವಣ್ಣ, ಸಮಸಮಾಜ*

**ಪೀಠಿಕೆ**

ವ್ಯಕ್ತಿಗಳು ನಿರ್ವಹಿಸುವ ಕೆಲಸಗಳ ಆಧಾರದ ಮೇಲೆ ಅವರ ಸ್ಥಾನಮಾನಗಳು, ಅಂತಸ್ತುಗಳು ನಿರ್ಧರಿಸುತ್ತಿದ್ದವು. ಕೆಳಜಾತಿಯವರನ್ನು ಕೀಳಾಗಿ ಕಾಣುವುದರ ಜೊತೆಗೆ ಶಿಕ್ಷಣದಿಂದಲೂ ವಂಚಿಸಲಾಗಿತ್ತು. ಅಸ್ಪೃಶ್ಯರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲಾಗುತಿತ್ತು. ಅಸ್ಪೃಶ್ಯರು ಉಳುಮೆ ಮಾಡಬಾರದು, ಆಕಳನ್ನು ಹಿಂಡಕೂಡದು, ಭೂ ಒಡೆಯರಾಗಬಾರದು ಮುಂತಾದ ರೀತಿಯಲ್ಲಿ ನಿಷೇಧಗಳನ್ನು ವಿಧಿಸಲಾಗಿತ್ತು. ಇಡೀ ಸಮಾಜದಲ್ಲಿ ಮೇಲು–ಕೀಳು ಭಾವನೆಗಳು ಕಂಡುಬರುತ್ತಿದ್ದವು.

ಬಸವಣ್ಣನವರು ಕ್ರಿ.ಶ. 1134 ರಲ್ಲಿ ಈಗಿನ ವಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ, ಇಂಗಳೇಶ್ವರ ಗ್ರಾಮದಲ್ಲಿ ಮಾದರಸ ಮತ್ತು ಮಾದಲಾಂಬಿಕೆ ದಂಪತಿಗಳಿಗೆ ಜನಿಸಿದರು. ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಬಸವಣ್ಣನವರು ಚಿಕ್ಕಂದಿನಿಂದಲೂ ವೈದಿಕ ಸಂಸ್ಕೃತಿಯ ಆಚರಣೆಗಳನ್ನು ವಿರೋಧಿಸಿದ್ದರು. ಅಕ್ಕ ನಾಗಮ್ಮ ಮತ್ತು ಭಾವ ಶಿವಸ್ವಾಮಿಯ ಜೊತೆಯಲ್ಲಿ ಬಾಲ್ಯವನ್ನು ಕಳೆದರು. ಬಸವಣ್ಣನವರಿಗೆ ಬ್ರಾಹ್ಮಣ ಸಂಪ್ರದಾಯದಂತೆ ಜನಿವಾರ ಹಾಕಲು ಬಂದಾಗ, ಬಸವಣ್ಣನವರು ತನಗಿಂತ ಹಿರಿಯಳಾದ ಅಕ್ಕ ನಾಗಮ್ಮನಿಗೆ ಹಾಕಲು ಹೇಳುತ್ತಾರೆ. ಆಗ ಇದು ಪುರುಷರಿಗೆ ಮಾತ್ರ ಸೀಮಿತ ಅಕ್ಕನಿಗೆ ಕೊಡಲು ಬರುವುದಿಲ್ಲ ಎಂದು ನುಡಿದಾಗ ಬಾಲ್ಯದಲ್ಲಿಯೇ ಇದನ್ನು ವಿರೋಧಿಸಿದರು.

***Please cite this article as:*** ಸಂಗನಗೌಡ ಶಿವನಗೌಡ. (2024). ಸಮ ಸಮಾಜದ ನಿರ್ಮಾಣದಲ್ಲಿ ವಿಶ್ವಗುರು ಬಸವಣ್ಣನವರ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 6–9

ಮಂಗಳವೇಡದ ರಾಜ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾದ ಬಸವಣ್ಣ ಹಲವಾರು ಜನಪರ ಮತ್ತು ಸಮಾಜ ಸುಧಾರಣೆ ಕ್ರಮಗಳನ್ನು ಕೈಗೊಂಡರು. ಕಾಯಕವೇ ಕೈಲಾಸ ವೆಂದು ಸಾರಿದರು. 12ನೇ ಶತಮಾನದಲ್ಲಿ ಕಾಯಕ ಕಲ್ಪನೆಯ ಬಗ್ಗೆ ಅಥವಾ ಕಾಯಕ ತತ್ವವನ್ನು ವಿಶೇಷವಾಗಿ ಪ್ರತಿಪಾದಿಸಿದರು. ಅಧಿಕಾರ ಹಾಗೂ ಐಶ್ವರ್ಯಗಳು ದೊರಕಿದ್ದರು ಮೋಹವಿಲ್ಲದ ಬಸವಣ್ಣನವರು ತಮ್ಮ ಮನೆಯ ಬಾಗಿಲನ್ನು ಭಕ್ತರಿಗಾಗಿ, ಜಂಗಮರಿಗಾಗಿ ತೆರೆದಿಟ್ಟರು. ದೂರದಿಂದ ಸಾಧಕರು ಶರಣ ಶರಣೆಯರು ಬರಲಾರಂಭಿಸಿದರು ಅವರ ಮನೆಯಲ್ಲಿ ನಿತ್ಯವೂ ಶಿವರಾತ್ರಿಯಾಯಿತು. ಪ್ರತಿದಿನ ಶರಣರ ಗೋಷ್ಠಿ ನಡೆಯುತ್ತಿತ್ತು. ತಮ್ಮ ಲಿಂಗಾಯತ ಧರ್ಮದ ಬಾಗಿಲನ್ನು ಎಲ್ಲರಿಗಾಗಿ ತೆರೆದಿಟ್ಟರು. ಯಾವುದೇ ಕುಲ, ಜಾತಿ, ಮತ, ಪಂಥ ಯಾವುದೇ ವೃತ್ತಿಯವನೇ ಆಗಲಿ ಬಂದು ಲಿಂಗಾಯತ ಧರ್ಮವನ್ನು ಸ್ವೀಕರಿಸಬಹುದಾಗಿತ್ತು. ಬಸವಣ್ಣನವರು ಜಾತಿಬೇಧ ತಪ್ಪು, ಹುಟ್ಟಿದ ಜಾತಿ ಮುಖ್ಯವಲ್ಲ, ಭಕ್ತಿ ಹಾಗೂ ಶುದ್ಧ ಜೀವನ ಮುಖ್ಯ ಎಂದು ಸಾರಿದರು. ಸ್ತ್ರೀಯರಿಗೆ ಆಧ್ಯಾತ್ಮಿಕ ವಿಚಾರದಲ್ಲಿ ಪುರುಷನಿಗೆ ಸರಿಸಮಾನವಾದ ಸ್ಥಾನಮಾನ ಹಕ್ಕಿದೆ ಎಂದು ಅವರಿಗೂ ಲಿಂಗಧಾರಣೆ, ದೀಕ್ಷಾ ಸಂಸ್ಕಾರಗಳಿಗೆ ಅವಕಾಶ ಕೊಟ್ಟು ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು.

ಬಸವಣ್ಣನವರು ವಚನಸಾಹಿತ್ಯದವನ್ನು ರಚಿಸಿದ್ದಾರೆ. ಹೇಳುವುದನ್ನೂ ಸಂಕ್ಷಿಪ್ತವಾಗಿ, ನೇರವಾಗಿ ಎಲ್ಲರಿಗೂ ತಿಳಿಯುವಂತೆ ಬಹು ಸರಳವಾಗಿ ಭಾಷೆ ಚಿಂತನೆಯಿಂದ ಕೂಡಿದ ವಚನಗಳಿಂದ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

***"ಇವನಾರವ,ಇವನಾರವ ಎಂದೆನ್ನದಿರಯ್ಯ***
***ಇವ ನಮ್ಮವ, ಇವ ನಮ್ಮವ ಎಂದೆನ್ನಿರಯ್ಯ"***

ಎಂದು ಸಮಾಜದ ಎಲ್ಲ ವರ್ಗದ ಜನರನ್ನು ಒಂದುಗೂಡಿಸಿದ ಬಸವಣ್ಣ ಜಾತೀಯತೆ ವಿರುದ್ದ ಸಮರ ಸಾರಿದರು. ಹೊಲೆಯನೆಂಬುವವನು ಊರ ಹೊರಗಿಹನೇ? ಊರ ಒಳಗಿಲ್ಲವೇ? ಎಂದು ಪ್ರಶ್ನಿಸಿ, ಅಸ್ಪಶ್ಯತೆಯ ಹೆಸರಿನಲ್ಲಿ ಊರ ಹೊರಗೆ ಇರಿಸಲಾದ ದಲಿತರನ್ನು ಕರೆತಂದು ಸಮಾಜ ಭಾಗವನ್ನಾಗಿ ಮಾಡಿದರು. ದೇವಾಲಯ, ಕುಡಿಯುವ ನೀರಿನ ಭಾವಿ ಕೆರೆಗಳನ್ನು ಬಳಸಲು ಇವರಿಗೂ ಸಮಾನ ಹಕ್ಕಿದೆಯೆಂದು ತೋರಿಸಿಕೊಟ್ಟರು.

**ಕಾಯಕ ಕಲ್ಪನೆ**

ಕಾಯಕ ಎಂಬ ಪದವನ್ನು ಸರಳ ಅರ್ಥದಲ್ಲಿ 'ಶ್ರಮ', 'ದುಡಿಮೆ', 'ಶರೀರ ಶ್ರಮ' ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ. ಬಸವೇಶ್ವರರು ಈ ಪದಕ್ಕೆ ನೈತಿಕ ಹಾಗೂ ಆಧ್ಯಾತ್ಮಿಕ ಆಯಾಮಗಳಲ್ಲಿ ಸೇರಿಸಿ ಅದನ್ನು ಒಂದು ಉದಾತ್ತ ಕಲ್ಪನೆಯಾಗಿಸಿದ್ದಾರೆ. (ಕಾಯವಿಲ್ಲದಿದ್ದರೆ ಕಾಯಕವೂ ಇಲ್ಲ, ಮಾನವನ ಪುರುಷಾರ್ಥ ಸಾಧನೆಯೇ ಇಲ್ಲ.) ಆದ್ದರಿಂದ ಕಾಯದಿಂದಲೇ ಸಂಪತ್ತು, ಕಾಯದಿಂದಲೇ ಮುಕ್ತಿ ಎಂದು ವ್ಯಕ್ತಪಡಿಸಿದ್ದಾರೆ.

ಕಾಯಕವೆಂಬುದು ಕೇವಲ ಜೀವಿತದ ಒಂದು ಸಾಧನವಲ್ಲ, ಅದು ಶರೀರ ಶ್ರಮದಿಂದ ಕೂಡಿದ ದುಡಿತವಲ್ಲ, ಅದು ಸತ್ಯ, ನ್ಯಾಯ, ಧರ್ಮಗಳ ನೆಲೆಯಲ್ಲಿ ಜೀವನ ನಿರ್ವಹಿಸುವುದನ್ನು, ಸೂಚಿಸುವುದು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಅನ್ನವನ್ನು ತಾನು ಸಂಪಾದಿಸಬೇಕು, ಪ್ರತಿಯೊಬ್ಬರೂ ಒಂದಲ್ಲ ಒಂದು ಕಾಯಕದಲ್ಲಿ ತೊಡಗಬೇಕು, ಎಲ್ಲಾ ಕಾಯಕಗಳು ಸಮಾನ ಅದರಲ್ಲೂ ಮೇಲು–ಕೀಳು ಎಂಬ ಭಾವನೆಗಳಿಲ್ಲ. ಕಾಯಕ ಅಥವಾ ವ್ಯಕ್ತಿಯನ್ನಾಧರಿಸಿ ಉಚ್ಚ/ನೀಚ ಎಂದು ವಿಭಾಗಿಸುವುದು ತರವಲ್ಲ ಎಂದು ಬಸವಣ್ಣನವರ ಕಾಯಕದ ದೃಷ್ಟಿಯಾಗಿದೆ.

ಇಲ್ಲಿ ಸಲ್ಲದವನು ಅಲ್ಲಿ ಸಲ್ಲನಯ್ಯ ಎಂಬ ನೇರ ನುಡಿಯಿಂದ ಮೈಗಳ್ಳರನ್ನು ಎಚ್ಚರಿಸಿ ಕಾಯಕವೇ ಕೈಲಾಸ ಎಂದು ಕೆಲಸದ ಮಹತ್ವವನ್ನು ಸಾರಿದರು.

1. ಕಾಯಕವು ವೀರಶೈವ ಪರಿಭಾಷೆಯಲ್ಲಿ ವ್ಯಕ್ತಿಯು ತನಗಾಗಿ ಮತ್ತು ಸಮಾಜಕ್ಕಾಗಿ ಶಿವಾರ್ಪಿತ ಭಾವದಿಂದ ಕೈಗೊಳ್ಳುವ ಕಾರ್ಯ.

2. ಕಾಯಕವೇ ಕೈಲಾಸ, ಕಾಯಕ ಮಾಡುತ್ತಲೇ ಶಿವನನ್ನು ಪಡೆಯುವರು, ಕಾಯಕದಿಂದಲೇ ಆಧ್ಯಾತ್ಮ ಸಾಧನೆಗೆ ಅಡ್ಡಿಪಡಿಸದು.
3. ಕಾಯಕದಲ್ಲಿ ಎಲ್ಲವೂ ಸಮಾನ ಪ್ರಾಮುಖ್ಯತೆ ಹೊಂದಿದೆ. ಮೇಲು–ಕೀಳು ಎಂಬಾ ತಾರತಮ್ಯವಿಲ್ಲ.
4. ಕಾಯಕ ಮಾಡುವುದು ನೈತಿಕಬದ್ಧತೆ,
5. ಪ್ರತಿಯೊಬ್ಬರೂ ತನ್ನ ಅನ್ನವನ್ನು ದುಡಿದು ತಿನ್ನಬೇಕು. ಕಾಯಕವನ್ನು ನ್ಯಾಯೋಚಿತವಗಿ ನಡೆಸಬೇಕು

**ಕಾಯಕ ತತ್ವ**

ಬಸವಣ್ಣನವರು **'ಕಾಯಕ ತತ್ವ'** ವನ್ನು ತಮ್ಮ ಪ್ರಮುಖ ಸಾಧನವನ್ನಾಗಿ ಆರಂಭಿಸಿದರು. ಹಾಗೆ ನೋಡುವದಾದರೆ ಕಾಯಕ ತತ್ವದ ಬಗ್ಗೆ ಋಗ್ವೇದದ ಮಂತ್ರವೊಂದರಲ್ಲಿ 'ವೃತ್ತಿಗಳು ಬೇರೆ ಬೇರೆ ಇರಬಹುದು, ಆದರೆ ಅವೆಲ್ಲಾ ಉದರ ಪೋಷಣೆಗಳೆಂದೇ ಇರುತ್ತವೆ. ಯಾವ ವೃತ್ತಿಯನ್ನು ಬೇಕಾದರೂ ಜೀವನ ನಿರ್ವಹಣೆಗಾಗಿ ಆಯ್ದುಕೊಳ್ಳಬಹುದು ಅವುಗಳಲ್ಲಿ 'ಮೇಲು–ಕೀಳು' ಎಂಬ ಭಾವನೆಗಳಿಲ್ಲ. ಕಾಯಕ ಮಾಡದವರು ಊಟ ಮಾಡಲು ಯೋಗ್ಯರಲ್ಲ, ವೈಚಾರಿಕತೆಯ ಧರ್ಮದೃಷ್ಟಿಯಿಂದ ನ್ಯಾಯವಾದ ರೀತಿಯಲ್ಲಿ ತಮ್ಮ ಕಾಯಕವನ್ನು ಮಾಡಬೇಕಾದ್ದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಹಾಗಾಗಿ ಪ್ರತಿಯೊಬ್ಬ ಮಾನವರೂ ಉದ್ಯೋಗಶೀಲನಾಗಬೇಕು. ತನಗೆ ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಅವಶ್ಯಕವಾದ ಪ್ರತಿಯೊಂದು ಕೆಲಸವನ್ನು ಪ್ರತಿಯೊಬ್ಬರೂ ನಿಸ್ವಾರ್ಥ ಸೇವಾ ಮನೋಭಾವದಿಂದ ಹಂಚಿಕೊಂಡು ಭಕ್ತಿ ಭಾವ ಶ್ರದ್ಧೆಯಿಂದ ಮಾಡಬೇಕು. ಈ ಹಿನ್ನಲೆಯಲ್ಲಿ ಬಸವಣ್ಣನವರು ಪ್ರಮುಖರು ಹಾಗಾಗಿ ಕಾಯಕ ತತ್ವದ ಪ್ರಮುಖ ರೂವಾರಿ, ಸಮಾನತೆಯ ಯುಗ ಪುರುಷ, ಭಕ್ತಿ ಭಂಡಾರಿ ಬಸವಣ್ಣನವರು ಕೈಗೊಂಡ ಕಾಯಕ ಧ್ಯೇಯದ ಕ್ರಾಂತಿಕಾರಿ ವಿಚಾರಗಳ ಹೆಜ್ಜೆಗಳು ಇಂದಿನ ಕಾರ್ಮಿಕ ಸಮಾಜಕ್ಕೆ ಅತ್ಯಗತ್ಯವಾಗಿವೆ. ಆದ್ದರಿಂದ ನಾವೆಲ್ಲರೂ ಕಾಯಕ ತತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾಗಬೇಕಾಗಿದೆ.

ಬಸವಣ್ಣನವರಿಂದ ಪ್ರತಿಪಾದಿತವಾದ ವೀರಶೈವ ಮತ, ಕಾಯಕ ತತ್ವದ ಕಲ್ಪನೆ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ ಮುಂತಾದವುಗಳು ಜನಪ್ರಿಯಗೊಂಡವು. ಸಹಸ್ರಾರು ಅನುಯಾಯಿಗಳು ಬಸವಣ್ಣನವರು ಬೋಧಿಸಿದ ಕಾಯಕ ತತ್ವದ ಮಾರ್ಗಗಳನ್ನು ಅನುಸರಿಸತೊಡಗಿ ಉಳಿದವರಿಗೆ ಮಾರ್ಗದರ್ಶನ ಮಾಡಿದರು. ಬಸವಣ್ಣನವರಿಂದ ಪ್ರಭಾವಿತರಾದ ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಹಡಪದ ಅಪ್ಪಣ್ಣ, ನುಲಿಯ ಚೆನ್ನಯ್ಯ, ಮೇದಾರ ಕೇತಯ್ಯ, ಸುಂಕದ ಬಂಕಣ್ಣ, ತುರುಗಾವಿ ಹಿರಾಮಣ್ಣ ಮುಂತಾದವರು ಕಾಯಕಗಳಲ್ಲಿ ತೊಡಗಿದ್ದು, ನಡೆ ನುಡಿ, ಚಿಂತನೆಗಳಲ್ಲಿ ಆದರ್ಶವನ್ನು ಮರೆದು ಮಹಾನ ಶಿವಭಕ್ತರಾಗಿದ್ದಾರೆ.

**ಸಾಮಾಜಿಕ ಸಮಾನತೆ**

ಹನ್ನೆರಡನೇಯ ಶತಮಾನದಲ್ಲಿ ಸಾಂಪ್ರದಾಯಿಕ ಹಿಂದೂ ಸಮಾಜವು ವರ್ಣ ವ್ಯವಸ್ಥೆ ಮತ್ತು ಜಾತಿ ಪದ್ದತಿಗಳ ಕಲುಷಿತ ಕಟ್ಟುಪಾಡುಗಳಿಂದ ತತ್ತರಿಸಿಹೊಗಿತ್ತು. ಬಸವಣ್ಣನವರು ಮೇಲು–ಕೀಳು, ಉಳ್ಳವ–ಇಲ್ಲದವ, ಹೆಣ್ಣು–ಗಂಡು ಮುಂತಾದ ವಿಭಜನೆಗಳಿಗೆ ಕೊಡಲಿ ಏಟನ್ನು ಕೊಟ್ಟು ಸಾಮಾಜಿಕ ಸಮಾನತೆಯನ್ನು ಭಾರತೀಯ ಹಿಂದೂ ಸಮಾಜದಲ್ಲಿ ಸ್ಥಾಪಿಸಿದರು. ಕಾಯಕ ಮತ್ತು ಹುಟ್ಟಿನಿಂದ ಜಾತಿ ಕುಲಗಳ ನಿರ್ಮಾಣವಾಗಲಾರದು ಎಂದು ಬಸವಣ್ಣನವರ ದಿಟ್ಟ ಅಭಿಪ್ರಾಯವಾಗಿತ್ತು.

ಬಸವಣ್ಣ ಸಾಮಾಜಿಕ ಸಮಾನತೆಯನ್ನು ತರುವ ಪ್ರಯತ್ನದಲ್ಲಿ ಸಮಾಜದಲ್ಲಿ ಶತಶತಮಾನಗಳಿಂದ ತುಳಿಯಲ್ಲಪಟ್ಟ ಜನರನ್ನು ಮೇಲೆತ್ತಿ ದ್ವಿಜರನ್ನಾಗಿಸಿ ಸರಿಸಮಾನವಾದ ಸ್ಥಾನಮಾನ ನೀಡಿದರು. ಸ್ವತ: ಬಸವಣ್ಣನವರೇ ಅನುಭವ ಮಂಟಪದಲ್ಲಿ

ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದು ಯಾವುದೇ ಬಿಂಕವಿಲ್ಲದೆ ಎಲ್ಲರ ಜೊತೆಗೆ ವ್ಯವಹರಿಸುತ್ತಿದ್ದರು. ಕುಂಬಾರ, ಮಡಿವಾಳ, ಅಂಬಿಗ, ಡೋಹರ ಮಾದಿಗ ಮೊದಲಾದ ತಳಸಮುದಾಯದವರ ಜೊತೆಯಲ್ಲಿ ಆರ್ಥಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಷಯಗಳ ಬಗ್ಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು.

ಬಸವಣ್ಣ ಸಾಮಾಜಿಕ ಅನ್ಯಾಯವನ್ನು ಬಾಲ್ಯದಿಂದಲೇ ಗಮನಿಸಿದ್ದರು. ಅನ್ಯಾಯವನ್ನು ದ್ರೋಹವೆಂದು ಬಗೆದರು. ಸ್ತ್ರೀಯರಿಗೆ ಪೂಜಾ ಸ್ವಾತಂತ್ರ್ಯವನ್ನು ನೀಡಿದರು, ಲಿಂಗಧಾರಣೆಯ ಅವಕಾಶವನ್ನು ಕಲ್ಪಿಸಿದರು, ಸ್ತ್ರೀಯರಿಗೆ ಆರ್ಥಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ವಿಷಯಗಳನ್ನು ಮುಕ್ತ ಮನಸ್ಸಿನಿಂದ ಚರ್ಚಿಸಲು ಅವಕಾಶಮಾಡಿಕೊಟ್ಟು ಸ್ತ್ರೀ–ಪುರುಷರ ನಡುವಿನ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿದರು.

**ಉಪಸಂಹಾರ**

ಒಟ್ಟಾರೆ ಢಾಂಬಿಕ ಧರ್ಮಾಚರಣೆಯ ವಿರುದ್ಧ ಧರ್ಮಯುದ್ಧ ಸಾರಿ ಶಾಂತಿಯುತ ಕ್ರಾಂತಿ ಮಾಡಿ ಅಂದಿನ ಕಲ್ಮಶ ಸಮಾಜದ ಕೊಳೆಯನ್ನು ಸಂಪೂರ್ಣವಾಗಿ ತೊಳೆಯಲು ಟೊಂಕ ಕಟ್ಟಿ ನಿಂತು ಜನತೆಯಲ್ಲಿ ಭಕ್ತಿ ರಸವನ್ನು ತುಂಬಿ ಸಮಾ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಕೀರ್ತಿ ಕಾಯಕಯೋಗಿ ಬಸವಣ್ಣನವರಿಗೆ ಸಲ್ಲುತ್ತದೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು ಎಲ್. (2010). *ಬಸವಣ್ಣನವರ ವಚನಗಳು.* ಸಪ್ನ ಬುಕ್‌ಹೌಸ್.
- ಭೈರಪ್ಪ ಕೆ. (2018). *ಸಮಗ್ರ ಭಾರತೀಯ ಸಮಾಜ.* ಸಪ್ನ ಬುಕ್‌ಹೌಸ್
- ರಂಜಾನ್ ದರ್ಗಾ. (2015). *ಬಸವಣ್ಣ ಮತ್ತು ಅಂಬೇಡ್ಕರ್.* ಲಡಾಯಿ ಪ್ರಕಾಶನ.